ಶ್ರೀ ಆರ್.ಎನ್. ಲಕ್ಷ್ಮೀಪತಿ.—ಪ್ರಶ್ನೆ ಏನಿತ್ತು ಅದರ ಬಗ್ಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ.ಎಚ್. ಕಾರಡಗಿ. ಏತ ನೀರಾವರಿ ಯೋಜನೆಗೆ ಸ್ಥಳ ಮಾಪನ ಕಾರ್ಯ ಮುಗಿಯಲು ಆರು ತಿಂಗಳು ಆಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇಷ್ಟು ತಡವಾಗಲು ಕಾರಣವೇನು ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ತನಿಖೆ ನಡೆಯುತ್ತಿದೆ, ಸರ್ವೆ ಕೆಲಸ ಮುಗಿದ ಮೇಲೆ ಎಷ್ಟು ಎಕರೆ ಭೂಮಿ ಸಿಗುತ್ತದೆ ಎನ್ನುವುದು ನಿಖರವಾಗಿ ತಿಳಿದಮೇಲೆ ಆಲೋಚನೆ ಮಾಡುತ್ತೇನೆ. ಈಗ ಸರ್ವೆ ಕೆಲಸ ಅಲ್ಲಿ ನಡೆಯುತ್ತಿದೆ.

ಪುತ್ತೂರು ನಗರದಲ್ಲಿ ಅಡ್ಡ ರಸ್ತೆಯ ನಿರ್ಮಾಣ

೪೪೪ (೩೫) ಶ್ರೀ ಕೆ. ರಾಮಭಟ್ (ಪುತ್ತೂರು).—ಲೋಕೋಪಯೋಗಿ ಹಾಗೂ ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಪುತ್ತೂರು ನಗರಕ್ಕೆ ಒಂದು ಅಡ್ಡ ರಸ್ತೆಯ ಅವಶ್ಯಕತೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ಅಡ್ಡ ರಸ್ತೆಗೆ ತಗಲಬಹುದಾದ ಒಟ್ಟು ವೆಚ್ಚವೆಷ್ಟು ? (ಭೂ ಸ್ವಾಧೀನ ಮತ್ತು ರಸ್ತೆ ರಚನೆಗೆ ತಗಲುವ ವೆಚ್ಚವನ್ನು ಬೇರೆ ಬೇರೆ ನಮೂದಿಸಬೇಕು);

ಇ) ೧೯೬೬-೬೪ನೇ ವರ್ಷದಲ್ಲಿ ಈ ಅಡ್ಡ ರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೇ ಇಲ್ಲವಾದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಉಪಮಾರ್ಗದ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಒಟ್ಟು ಅಂದಾಜು ವೆಚ್ಚ ೫೦-೦೦ ಲಕ್ಷ ರೂ. ಗಳು

ಭೂ ಸ್ವಾಧೀನ ವೆಚ್ಚ	.....	೨೧-೦೦ ಲಕ್ಷ ರೂ.ಗಳು.
ರಸ್ತೆ ನಿರ್ಮಾಣ ವೆಚ್ಚ	.....	೨೯-೦೦ ಲಕ್ಷ ರೂ. ಗಳು.

ಇ) ಈ ಕೆಲಸವನ್ನು ಹಣದ ಅಭ್ಯತೆಯನ್ನು ಗಮನಿಸಿ ಆದ್ಯತೆಯ ಪ್ರಕಾರ ತೆಗೆದುಕೊಳ್ಳಲಾಗುವುದು

ಶ್ರೀ ಕೆ. ರಾಮಭಟ್.—೨ ವರ್ಷಗಳಿಂದ ಬಜೆಟ್‌ನಲ್ಲಿ ೫೦ ಸಾವಿರ ರೂಪಾಯಿ ಎಂದು ಇಟ್ಟಿದ್ದೀರಿ. ಆ ಹಣವನ್ನು ಏತಕ್ಕೆ ಇಟ್ಟಿದ್ದಿರೊ ಗೊತ್ತಿಲ್ಲ. ಪುತ್ತೂರುನಗರದ ಅಡ್ಡರಸ್ತೆಯನ್ನು ಯಾವಾಗ ಶುರುಮಾಡುತ್ತೀರಿ ಎಂಬುದೆನ್ನು ನಿಖರವಾಗಿ ಹೇಳುತ್ತೀರಾ ?

ಶ್ರೀ ಎಚ್.ಡಿ ದೇವೇಗೌಡ —ಈ ಕೆಲಸ ತೆಗೆದುಕೊಳ್ಳಬೇಕಾದರೆ ಕೆಲವು ತೊಂದರೆಗಳಿವೆ. ಸುಮಾರು ೧೭ ಎಕರೆಗೆ ಮೇಲ್ಪಟ್ಟು ವೆಟ್‌ಲ್ಯಾಂಡ್ ಅಕ್ವೈರ್ ಮಾಡಬೇಕಾಗುತ್ತದೆ. ಅದೇ ರೀತಿ ೧೧-೦೩ ಎಕರೆ ಡ್ರೈಲ್ಯಾಂಡ್ ಅಕ್ವೈರ್ ಮಾಡಬೇಕಾಗುತ್ತದೆ, ಜೊತೆಗೆ ೩.೧೬ ಎಕರೆ ಗಾರ್ಡನ್ ಲ್ಯಾಂಡ್ ಅಕ್ವೈರ್ ಮಾಡಬೇಕಾಗುತ್ತದೆ. ಭೂಸ್ವಾಧೀನ ಮಾಡಿಕೊಳ್ಳಲಿಕ್ಕೆ ೨೧ ಲಕ್ಷ ರೂಪಾಯಿ ಪರಿಹಾರ ಹಣ ಕೊಡಬೇಕಾಗುತ್ತದೆ. ಪುತ್ತೂರು ನಗರ ಪ್ರಮುಖವಾದ ನಗರವೆಂಬುದು ಗೊತ್ತು. ಸುಮಾರು ೫ ಸಾವಿರ ವಾಹನಗಳು ಪ್ರತಿದಿನ ಓಡಾಡುತ್ತವೆ. ಸುಮಾರು ೪ ಕಿಲೋಮಿಟರ್ ಬೈಪಾಸ್ ರಸ್ತೆ ಮಾಡಬೇಕಾಗುತ್ತದೆ. ಈಗಿರತಕ್ಕ ತೊಂದರೆಯನ್ನು ಶೀಘ್ರ ನಿವಾರಣೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಕೆಲಸಕ್ಕಾಗಿ ಬಜೆಟ್‌ನಲ್ಲಿ ೫೦ ಸಾವಿರ ಇಟ್ಟಿದ್ದೇವೆ. ಕೆಲವು ಫಾರ್ಮಾಲಿಟೀಸ್ ಅಬ್ಸರ್ವ್ ಮಾಡಬೇಕಾಗುತ್ತದೆ. ಭೂಸ್ವಾಧೀನ ಕೆಲಸ ಮುಗಿದ ಮೇಲೆ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ರಾಂಪಭಟ್.—ತಮ್ಮ ಲೋಕೋಪಯೋಗಿ ಇಲಾಖೆಯ ನಿಯಮದ ಪ್ರಕಾರ, ಟೋಟಲ್ ಕಾಸ್ಟ್‌ನ ಒನ್‌ಥರ್ಡ್ ಹಣ ಇಡಬೇಕೆಂದು ನಿಯಮವಿದೆ. ಆ ಪ್ರಕಾರ ಭೂಸ್ವಾಧೀನಕ್ಕೆ ತಗಲುವ

ವೆಚ್ಚ ೨೧ ಲಕ್ಷ ರೂಪಾಯಿಗಳಲ್ಲಿ ಒನ್‌ಥರ್ಟ್ ಹಣವನ್ನು ಪ್ರತಿವರ್ಷ ಇಟ್ಟರೆ ಕೆಲಸ ಪ್ರಾರಂಭ ಮಾಡ ಬಹುದು. ಭೂಮಿಯನ್ನು ಆಕ್ವೈರ್ ಮಾಡಿಕೊಳ್ಳುವುದಕ್ಕೆ ಒಂದೇ ವರ್ಷದಲ್ಲಿ ಸಾಧ್ಯವಾಗುವುದಿಲ್ಲ. ಹಣವನ್ನು ನಿಮ್ಮ ನಿಯಮದ ಪ್ರಕಾರ ಇಟ್ಟು ನಿಧಾನವಾಗಿ ಮಾಡಬೇಕಾಗುತ್ತದೆ. ಒನ್‌ಥರ್ಡ್ ಹಣವನ್ನು ಇಟ್ಟು ಕೆಲಸ ಶುರು ಮಾಡುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.—ಕೆಲಸ ಶುರು ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಭೂಸ್ವಾಧೀನ ಮಾಡಿಕೊಳ್ಳಲಿಕ್ಕೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡಿದೆ.

ಶ್ರೀ ಕೆ. ರಾಂಭಟ್.—ಸೂಕ್ತ ಕ್ರಮ ಅಂದರೆ ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಚ್.ಡಿ ದೇವೇಗೌಡ.—ನಾನು ಮೊದಲೇ ಹೇಳಿದ್ದೇನೆ ೨೧ ಲಕ್ಷ ರೂಪಾಯಿ ಹಣವನ್ನು ಭೂಮಿ ಆಕ್ವೈರ್ ಮಾಡಲಿಕ್ಕೆ ಕೊಡಬೇಕು. ಸಾಕಷ್ಟು ಅಡೆತಡೆಗಳಿವೆ. ಈ ಕೆಲಸವನ್ನು ಸಭೆಯ ಮುಂದೆ ಈ ವರ್ಷವೇ ಕಂಪ್ಲೀಟ್ ಮಾಡುತ್ತೇನೆಂದು ಹೇಳುವುದು ಕಷ್ಟ.

ಶ್ರೀ ಕೆ. ರಾಂಭಟ್.—ನಾನು ಕೇಳುವುದು ಇಷ್ಟೆ, ಭೂಮಿ ಆಕ್ವೈರ್ ಮಾಡಿಕೊಳ್ಳಲಿಕ್ಕೆ ನಿಮ್ಮ ನಿಯಮದ ಪ್ರಕಾರ ಒನ್‌ಥರ್ಡ್ ಹಣವನ್ನು ಏತಕ್ಕೆ ಇಡಬಾರದು ?

ಅಧ್ಯಕ್ಷರು.—ಕೆಲಸ ಪ್ರಾರಂಭ ಮಾಡದೆ, ಹಣ ಇಟ್ಟರೆ ನಿಮಗೆ ತೃಪ್ತಿಯಾಗುತ್ತದೆಯೆ ?

ಶ್ರೀ ಕೆ. ರಾಂಭಟ್.—ರಸ್ತೆ ಮಾಡುವುದಕ್ಕೆ ಲ್ಯಾಂಡ್ ಆಕ್ವೈರ್ ಮಾಡುವುದಕ್ಕೆ ಸರ್ಕಾರ ತಯಾರಾಗಿದೆ. ಅದಕ್ಕೆಲ್ಲಾ ನೋಟೀಫಿಕೇಶನ್ ಮತ್ತು ಕೆಲವು ಫಾರ್ಮಲಿಟೀಸ್ ಮಾಡಬೇಕಾಗುತ್ತದೆ ಅದನ್ನಾದರೂ ಮಾಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಸಾಧ್ಯವಾದ ಮಟ್ಟಿಗೂ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ನೀರವಾಗಿ ಇಷ್ಟೆ ಮಾಡುತ್ತೇನೆ, ಅಷ್ಟು ಹಣ ಕೊಡುತ್ತೇನೆಂದು ಹೇಳುವುದರಿಂ ಕಷ್ಟ

ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುವ ದಿನಗೂಲಿ ನೌಕರರ ವಿಚಾರ.

೪೬ (೫೨). ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ಲೊಕೋಪಯೋಗಿ ಇಲಾಖೆಯಲ್ಲಿ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿರುವ ನೌಕರರುಗಳ ಸಂಖ್ಯೆ ಎಷ್ಟು ?

ಆ) ಇವರುಗಳು ಎಷ್ಟು ವರ್ಷಗಳಿಂದ ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ?

ಇ) ಇವರುಗಳ ವಿದ್ಯಾರ್ಹತೆ, ವಯೋಮಿತಿ ಇತ್ಯಾದಿಗಳನ್ನು ಗಮನಿಸಿ ಇವರನ್ನು ಖಾಯಂ ಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ.—(ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು)—.

ಅ) ಸಂಖ್ಯೆ ೩೨,೪೫೮ (೧-೬-೧೯೮೩ರಲ್ಲಿ ಇದ್ದಂತೆ)

ಆ) ಇದನ್ನು ಲಗತ್ತಿಸಲಾಗಿದೆ.

ಇ) ಸರ್ಕಾರ ಇದನ್ನು ಪರಿಶೀಲಿಸಲು ಒಂದು ಸಮಿತಿಗೆ ಒಪ್ಪಿಸಿದೆ.
ಸಮಿತಿಯ ವರದಿಯು ತಲುಪದೊಡನೆ ಸರ್ಕಾರವು ಇದರ ಬಗ್ಗೆ ಸೂಕ್ತಕ್ರಮಗಳನ್ನು ಕೈಗೊಳ್ಳುವುದು.